

# ನಂದಿ ದೇವಸ್ಥಾನದಲ್ಲಿ ಋತು-ರಮ್ಯ

ಆದ್ರೆ ನಂಗೆ ಮದುವೆಯ ಬಗ್ಗೆ ಇಂಟರೆಸ್ಟೇ ಹೋಗ್ಬಿಟ್ಟಿದೆ. ಯಾವ ಗಂಡಸರ ಸ್ವಭಾವ ಹೇಗಿರುತ್ತೋ? ನಂಗ್ಯಾಕೋ ಭಯವಾಗುತ್ತೆ ಋತು. ಅದಕ್ಕೆ ಕೊನೆಯವರೆಗೂ ಅಪ್ಪಾಜಿಗೆ ಆಸರೆಯಾಗಿ ಇದ್ದು ಬಿಡೋಣ ಅಂತಿದ್ದೀನಿ.'

ತನ್ನ ದೀರ್ಘವಾದ ಕಥೆ ಮುಗಿಸಿ ರಮ್ಯ ಕಣ್ಣೊರೆಸಿಕೊಂಡಾಗ ಋತುವಿಗೂ ಸಂಕಟವಾಯಿತು. ಸಾಂತ್ವನ ನೀಡುವಂತೆ ಅವಳ ಕೈಯ್ಯನ್ನು ಅದುಮಿದಳು.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿರುವ ಸಲಿಂಗಕಾಮ ಭಾರತದಲ್ಲೂ ಸಾಕಷ್ಟಿದೆ ಎಂಬುದು ರಮ್ಯಾಳ ಮಾತಿನಿಂದ ಮತ್ತೊಮ್ಮೆ ಸಾಬೀತಾಗಿತ್ತು. ಇತ್ತೀಚೆಗಷ್ಟೇ ಭಾರತದಲ್ಲೂ ಸಲಿಂಗಕಾಮಿಗಳು ತಮಗೆ ಮಾನ್ಯತೆ ನೀಡಬೇಕೆಂದು ಕಾನೂನಿನ ಮೊರೆ ಹೋಗಿ, ಕೊನೆಗೆ ಅದೇ ಕಾನೂನು ಸಲಿಂಗಕಾಮವನ್ನು ಅಪರಾಧವೆಂದು ಪರಿಗಣಿಸಲ್ಪಟ್ಟ ವಿಷಯವನ್ನು ಋತುವೂ ಓದಿಕೊಂಡಿದ್ದಳು. ಸಲಿಂಗಕಾಮಿಗಳು ತಮ್ಮನ್ನು ಎಷ್ಟೇ ಸಮರ್ಥಿಸಿಕೊಂಡರೂ ಅವರದು ಪ್ರಕೃತಿಗೆ ವಿರುದ್ಧವಾದ ಅಸಹಜವಾದ ನಡವಳಿಕೆ. ಗಂಡು ಹೆಣ್ಣುಗಳ